ವಿಷಯ :- ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 973 (118)

ಶ್ರೀ ಹೆಚ್. ಶಿವಪ್ಪ (ಹರಿಹರ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ಇಲಾಖೆಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳು?

ಆ) ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ?

ಇ) ಇಲ್ಲದಿದ್ದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು?

ಈ) ಸರ್ಕಾರಿ ನೌಕರರುಗಳಿಗೆ ಪ್ರತಿ ತಿಂಗಳು ಸಂಬಳ ಪಾವತಿ ಮಾಡುವುದಕ್ಕೆ ಈ ದಿನದಲ್ಲಿರುವಂತೆ, ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ಒಟ್ಟು ಹೊರೆಯೆಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಯವರು) :-

ಅ) 6,71,733

ಆ) ಇಲ್ಲ

ಇ) ನೇರ ನೇಮಕಾತಿ ನಿರ್ಬಂಧವನ್ನು ದಿನಾಂಕ 8-11-93 ರಿಂದ ರದ್ದು ಗೊಳಿಸಲಾಗಿದೆ. ಅವಶ್ಯವಿರುವ ಕಡೆ ನೇರ ನೇಮಕಾತಿ ಮಾಡಲು ಆರ್ಥಿಕ ಮಿತ ವ್ಯಯದ ಆದೇಶವನ್ನು ಸಡಿಲಿಸಿ ರಿಕ್ತ ಸ್ಥಾನಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 232.07 ಕೋಟಿ ರೂಪಾಯಿಗಳು.

ವಿಷಯ :- ಭದ್ರಾ ಮೇಲ್ದಂಡೆ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 974 (773)

ಶ್ರೀ ಹೆಚ್. ಶಿವಪ್ಪ (ಹರಿಹರ) :- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಯಾವಾಗ ಯೋಜಿಸಲಾಯಿತು?

ಆ) ಹಾಗಾದರೆ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ?

ಇ) ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಕೆ. ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು 1969 ರಲ್ಲಿ ಯೋಜಿಸಲಾಯಿತು.

ಆ) ಇಲ್ಲ.

ಇ) ಯೋಜನೆಯ ಸರ್ವೆ ಕಾರ್ಯವನ್ನು ಪ್ರಾರಂಭಿಸಲು ಆದೇಶಿಸಲಾಗಿದೆ.

ವಿಷಯ :- ಶಿರಿಮಾಪುರದ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 979 (1683)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಶಿರಿಮಾಪುರ ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭಿಸಲಾಯಿತು;

ಆ) ಈ ಯೋಜನೆ ಕಾಮಗಾರಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿರುವುದು ನಿಜವೇ, ಹಾಗಿದ್ದಲ್ಲಿ ಪೂರ್ಣಗೊಳ್ಳದೇ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಇ) ಈ ರೀತಿಯ ವಿಳಂಬದಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿಲ್ಲ.

ಆ) ನಿಜವಲ್ಲ. ಈ ಯೋಜನೆಯ ಅಂದಾಜಿಗೆ ಅನುಮೋದನೆ ನೀಡದಿರುವುದರಿಂದ ಇದನ್ನು ಪ್ರಾರಂಭಿಸಿಲ್ಲ.

ಇ) ಹೌದು. ಯೋಜನೆಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ತೆಗೆದುಕೊಂಡು ಇದನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.